

ಭಾರತದ ಪ್ರತಿಯೊಂದು ಮನೆಯಲ್ಲೂ
ಸ್ಕೌಟ್ಸ್ ಮತ್ತು ಗೈಡ್ಸ್‌ಗಳಂತಹ
ಮಕ್ಕಳಿರಬೇಕೆಂದು ನಾನು ಅಪೇಕ್ಷಿಸುತ್ತೇನೆ.
– ಮಹಾತ್ಮ ಗಾಂಧಿ



The Real way to get Happiness
is by Giving out Happiness to other People
-Lord Baden Powell

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

THE BHARAT SCOUTS & GUIDES, KARNATAKA

www.bsgkarnataka.in



2025ರ ಆಗಸ್ಟ್ 15ರಂದು ಬೆಂಗಳೂರಿನ ಮಾಣಿಕ್ ಷಾ ಪೆರೇಡ್ ಮೈದಾನದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ
ನಡೆದ ರಾಜ್ಯ ಮಟ್ಟದ ಕವಾಯತು ಪ್ರದರ್ಶನದಲ್ಲಿ ರಾಜ್ಯ ಸಂಸ್ಥೆಯನ್ನು ಪ್ರತಿನಿಧಿಸಿದ
ಬೆಂಗಳೂರಿನ ಆರ್.ಐ. ನಗರ ಪಬ್ಲಿಕ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ರಾಜ್ಯ ಮಟ್ಟದ ಪಥಸಂಚಲನ ಕಾರ್ಯಕ್ರಮದಲ್ಲಿ
ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದ ಪ್ರಯುಕ್ತ ತಂಡದ ನಾಯಕಿ ಕುಮಾರಿ ಉಮ್ಮೈಮಾ ಅವರಿಗೆ ರಾಜ್ಯದ
ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಸ್ಥೆಯ ಅಧ್ಯಕ್ಷರಾದ **ಶ್ರೀ ಸಿದ್ದರಾಮಯ್ಯನವರು** ಮತ್ತು
ಮಾನ್ಯ ಉಪಮುಖ್ಯಮಂತ್ರಿಗಳಾದ **ಶ್ರೀ ಡಿ.ಕೆ. ಶಿವಕುಮಾರ್‌ರವರು** ಪಾರಿತೋಷಕವನ್ನು ನೀಡಿ ಅಭಿನಂದಿಸಿದರು.
ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ॥ ಶಾಲಿನಿ ರಜನೀಶ್‌ರವರು, ಭಾ.ಆ.ಸೇ. ಉಪಸ್ಥಿತರಿದ್ದರು.

ವಾರ್ಷಿಕ ಕಾರ್ಯಕ್ರಮಗಳ ಯೋಜನೆ

Annual Programmes Plan

2026-27

ನಮ್ಮ ಹೆಮ್ಮೆಯ ಸಂಸ್ಥಾಪಕರು



Yuvaraja
Sri Kanteerava Narasihmaraja Wodeyar
Chief Scout
Prince Sri Jayachamarajendra Wodeyar
Chief Cub

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್

(1884 – 1940)

ಧನತೆವೆತ್ತ ಮಹಾರಾಜರು, ಮೈಸೂರು ಸಂಸ್ಥಾನ
ಮತ್ತು ಸ್ಕೌಟ್–ಗೈಡ್ ಚಳವಳಿಯ ಸಂಸ್ಥಾಪಕರು



Sri THAAWARCHAND GEHLOT
Governor of Karnataka
Patron, Bharat Scouts and Guides, Karnataka

Message

I am happy to know that the Bharat Scouts & Guides, Karnataka publishing an Annual Programme Plan Booklet, which serve as a guiding framework for organizing various Activities, Training and Programmes across the state.

The Bharat Scouts and Guides movement has consistently inspired young mind to live by values of service, discipline, leadership and unity. Your continued efforts in community service, environmental stewardship and youth empowerment are an example of the impact a committed organization can make.

I send my best wishes and Warm greetings to the Organizers, participants and souvenir team and also for a grand success of the event.

(Thaawarchand Gehlot)



ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ
ಅಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಕರ್ನಾಟಕ

ಸಂದೇಶ

ಓಂ ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ಪೂರ್ಣಮುದಚ್ಯತೆ
ಪೂರ್ಣಸ್ಯ ಪೂರ್ಣಮಾದಾಯ,
ಪೂರ್ಣಮೇವಾವಶಿಷ್ಯತೇ

ವೇದಗಳಲ್ಲಿ ಉಲ್ಲೇಖವಾಗಿರುವ ಈ ಶ್ಲೋಕವು ನಾವು ವಿದ್ಯೆ ಅಥವಾ ಜ್ಞಾನ ಹಾಗೂ ಪರಿಪೂರ್ಣತೆಯನ್ನು ಯಾವುದರಿಂದ ಪಡೆಯುತ್ತೇವೆ ಎಂದು ಹೇಳುತ್ತದೆ. ಇದೇ ಹಾದಿಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಸಮಾಜದ ಬಗೆಗಿನ ಜ್ಞಾನವನ್ನು ನೀಡುತ್ತಿದೆ. ಸಮ ಸಮಾಜದ ಕನಸನ್ನು ಸಾಕಾರ ಮಾಡಲು ಪಿ.ಜಿ.ಆರ್ ಸಿಂಧ್ಯಾ ಅವರ ನೇತೃತ್ವದಲ್ಲಿ ಕೆಲಸ ಮಾಡುತ್ತಿದೆ.

ಸ್ಕೌಟ್ಸ್ ಮತ್ತು ಗೈಡ್ ಚಟುವಟಿಕೆಗಳು, ತರಬೇತಿಗಳು, ಶಿಬಿರಗಳ ಆಯೋಜನೆ ಸೇರಿದಂತೆ ಹೇಗೆ ಮಾರ್ಗದರ್ಶನ ಮಾಡಬೇಕು ಎನ್ನುವ ಕುರಿತಾಗಿ 2026–27ನೇ ಸಾಲಿನ 'ವಾರ್ಷಿಕ ಕಾರ್ಯಕ್ರಮ ಯೋಜನೆ' ಪುಸ್ತಕ ಹೊರತರುತ್ತಿರುವುದು ಸಂತಸದಾಯಕ ವಿಚಾರ. ಇದಕ್ಕೆ ಮೊದಲಿಗೆ ಶುಭಕೋರುತ್ತೇನೆ. ವಿದ್ಯಾರ್ಥಿಗಳಾಗಿದ್ದಾಗ ದೊರೆಯುವ ಎಲ್ಲಾ ಅವಕಾಶ, ಸಂಪೂರ್ಣ ಸಮಯ ಬಳಸಿಕೊಳ್ಳೋಕು. ನಮ್ಮಲ್ಲಿ ಒಂದಷ್ಟು ಪರಿಪಕ್ವ ಗುಣಗಳು ಬೆಳೆಯಲು ಗುರು ಸಮಾನವಾದ ಒಂದು ಸಂಸ್ಥೆ ಬೇಕಾಗುತ್ತದೆ ಅದನ್ನ ನೀವು ಸ್ಕೌಟ್ ಮತ್ತು ಗೈಡ್ಸ್‌ನಿಂದ ಪಡೆಯಬಹುದು. ನಾನು ಒಬ್ಬ ಶಿಕ್ಷಣ ಪ್ರೇಮಿಯಾಗಿ ಇಂತಹ ಪಠ್ಯೇತರ ಚಟುವಟಿಕೆಗಳಿಗೆ ಸದಾ ಬೆಂಬಲಿಗನಾಗಿ ಇರುತ್ತೇನೆ. ಈ ಸಂಸ್ಥೆಯು ಸಮಾಜದ ಅಂಕುಡೊಂಕುಗಳನ್ನು ವಿದ್ಯಾರ್ಥಿಗಳಿಗೆ ತಿಳಿ ಹೇಳಿ ಸದೃಢ ಸಮಾಜಕ್ಕೆ ಅಡಿಪಾಯ ಹಾಕುತ್ತವೆ ಎಂಬುದು ನನ್ನ ಬಲವಾದ ನಂಬಿಕೆ.

ನಾನು ಸಹ ವಿದ್ಯಾರ್ಥಿ ದೆಸೆಯಲ್ಲಿ ಈ ಸಂಸ್ಥೆಯ ಭಾಗವಾಗಿದೆ. ಈ ಸಂಸ್ಥೆಯಿಂದ ವಿದ್ಯಾರ್ಥಿಗಳು ನಾಯಕತ್ವ ಗುಣ ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳಾದ ನೀವು ಶಿಸ್ತಿನ ಜೊತೆಗೆ ದೇಶಪ್ರೇಮ ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ, ಶಿಕ್ಷಣಕ್ಕೆ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಿಂದ ಪೂರಕ ಶಕ್ತಿ ದೊರೆಯುತ್ತದೆ ಇದನ್ನು ಬಳಸಿಕೊಳ್ಳಬೇಕು ಎಂದು ಆಶಿಸುತ್ತೇನೆ.

(ಡಿ.ಕೆ. ಶಿವಕುಮಾರ್)



ಶ್ರೀ ಸಿದ್ಧರಾಮಯ್ಯ
ಮಾನ್ಯ ಮಾಜಿ ಮುಖ್ಯಮಂತ್ರಿಗಳು

ಸಂದೇಶ

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ 2026–27ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕವನ್ನು ಹೊರತರುತ್ತಿರುವುದು ಸಂತಸದ ಸಂಗತಿ.

ವಿದ್ಯಾರ್ಥಿದೆಸೆಯಿಂದಲೇ ಶಿಸ್ತು, ದೇಶಭಕ್ತಿ ಮತ್ತು ಸೇವಾಮನೋಭಾವವನ್ನು ಬೆಳೆಸುವ ಮೂಲಕ, ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಸದೃಢ ರಾಷ್ಟ್ರ ನಿರ್ಮಾಣದ ತಳಹದಿಯಾಗಿದೆ.

ಇಂದಿನ ಆಧುನಿಕ ಜಗತ್ತಿನಲ್ಲಿ ಶಿಕ್ಷಣದ ಜೊತೆಗೆ ನೈತಿಕ ಹಾಗೂ ಸಾಮಾಜಿಕ ಜವಾಬ್ದಾರಿಯೂ ಅತ್ಯಗತ್ಯವಾಗಿದ್ದು, ಸಮಾಜಕ್ಕೆ ಪ್ರಜ್ಞಾವಂತ ಮತ್ತು ಜವಾಬ್ದಾರಿಯುತ ನಾಗರಿಕರನ್ನು ಸಂಸ್ಥೆಯು ಕೊಡುಗೆಯಾಗಿ ನೀಡುತ್ತಿದೆ. 'ಸೇವೆಗೆ ಸದಾ ಸಿದ್ಧ' ಎಂಬ ಧ್ಯೇಯವಾಕ್ಯದೊಂದಿಗೆ ಅಗತ್ಯ ಸಂದರ್ಭಗಳಲ್ಲಿ ದೇಶದ ಜನರ ಸಂಕಷ್ಟಗಳಿಗೆ ಹೆಗಲಾಗುವ ಈ ಪಡೆಯ ಬದ್ಧತೆ ಪ್ರಶಂಸನೀಯ.

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಂಡಿರುವ ಅಭಿಯಾನಗಳು ಮತ್ತು ಕಾರ್ಯಕ್ರಮಗಳು ರಾಜ್ಯದ ಮೂಲೆ ಮೂಲೆಗಳ ವಿದ್ಯಾರ್ಥಿಗಳನ್ನು ತಲುಪಲಿ ಎಂದು ಆಶಿಸುತ್ತಾ, 2026–27ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕವು, ಸಂಸ್ಥೆಯ ಅಧಿಕಾರಿಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶಕವಾಗಿ ಮೂಡಿಬರಲಿ ಎಂದು ಹಾರೈಸುತ್ತೇನೆ.

(ಸಿದ್ದರಾಮಯ್ಯ)



ಯು.ಟಿ. ಖಾದರ್ ಫರೀದ್
ಮಾನ್ಯ ಆರೋಗ್ಯ ಸಚಿವರು, ಕರ್ನಾಟಕ ಸರ್ಕಾರ
ಹಾಗೂ
ಹೆಚ್ಚುವರಿ ರಾಜ್ಯ ಮುಖ್ಯ ಆಯುಕ್ತರು, ಭಾ.ಸ್ಕೌ.ಗೈ.

ಸಂದೇಶ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ 2026–27ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನೆ (Annual Programmes Plan) ಪುಸ್ತಕಕ್ಕೆ ನನ್ನ ಹೃತ್ಪೂರ್ವಕ ಶುಭಾಶಯಗಳನ್ನು ತಿಳಿಸಲು ನನಗೆ ಅತ್ಯಂತ ಸಂತೋಷವಾಗುತ್ತಿದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ವಿದ್ಯಾರ್ಥಿಗಳಲ್ಲಿ ಶಿಸ್ತು, ನಾಯಕತ್ವ, ಸೇವಾ ಮನೋಭಾವ, ದೇಶಭಕ್ತಿ ಹಾಗೂ ಸಾಮಾಜಿಕ ಜವಾಬ್ದಾರಿತನವನ್ನು ಬೆಳೆಸುವ ಮಹತ್ವದ ಕಾರ್ಯವನ್ನು ನಿರಂತರವಾಗಿ ನಿರ್ವಹಿಸುತ್ತಿದೆ. ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳನ್ನು ವ್ಯಕ್ತಿತ್ವ ವಿಕಾಸದ ದಿಕ್ಕಿನಲ್ಲಿ ಪ್ರೇರೇಪಿಸಿ, ಸಮಾಜಮುಖಿ ಚಟುವಟಿಕೆಗಳ ಮೂಲಕ ಉತ್ತಮ ನಾಗರಿಕರನ್ನಾಗಿ ರೂಪಿಸುವಲ್ಲಿ ಈ ಸಂಸ್ಥೆಯ ಪಾತ್ರ ಅತ್ಯಂತ ಶ್ಲಾಘನೀಯವಾಗಿದೆ.

2026–27ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನೆ ಪುಸ್ತಕವು ರಾಜ್ಯದ ವಿವಿಧ ಹಂತಗಳಲ್ಲಿ ನಡೆಯಲಿರುವ ತರಬೇತಿಗಳು, ಶಿಬಿರಗಳು, ಸೇವಾ ಕಾರ್ಯಕ್ರಮಗಳು ಹಾಗೂ ವಿವಿಧ ಚಟುವಟಿಕೆಗಳಿಗೆ ಸಮಗ್ರ ಮಾರ್ಗದರ್ಶಿಯಾಗಲಿದೆ ಎಂಬ ವಿಶ್ವಾಸವಿದೆ. ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸ್ಕೌಟ್ಸ್–ಗೈಡ್ಸ್ ಕಾರ್ಯಕರ್ತರು ಈ ಯೋಜನೆಯ ಸದುಪಯೋಗ ಉದ್ದೇಶಗಳನ್ನು ಯಶಸ್ವಿಯಾಗಿ ಪಡೆದು ಸಂಘಟನೆಯ ಅನುಷ್ಠಾನಗೊಳಿಸುವಂತೆ ಹಾರೈಸುತ್ತೇನೆ.

ರಾಜ್ಯದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಬೆಳವಣಿಗೆಗೆ ಶ್ರಮಿಸುತ್ತಿರುವ ರಾಜ್ಯ ಮುಖ್ಯ ಆಯುಕ್ತರು, ಎಲ್ಲಾ ಪದಾಧಿಕಾರಿಗಳು, ಶಿಕ್ಷಕರು ಹಾಗೂ ಸ್ವಯಂಸೇವಕರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಯುವಜನತೆಯ ಸರ್ವಾಂಗೀಣ ಅಭಿವೃದ್ಧಿಗೆ ಈ ಚಳವಳಿ ಇನ್ನಷ್ಟು ಬಲವಾಗಿ ಬೆಳೆಯಲಿ ಎಂದು ಆಶಿಸುತ್ತೇನೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು ಹಮ್ಮಿಕೊಳ್ಳಲಿರುವ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಲಿ ಹಾಗೂ ಸಂಸ್ಥೆಯ 2026–27ನೇ ಸಾಲಿನ ಕಾರ್ಯಚಟುವಟಿಕೆಗಳ ಕುರಿತು ಹೊರತರುತ್ತಿರುವ ಈ ಪುಸ್ತಕವು ವಿದ್ಯಾರ್ಥಿಗಳು ಹಾಗೂ ಯುವಜನತೆಗೆ ಸ್ಫೂರ್ತಿದಾಯಕವಾಗಲಿ ಎಂದು ಹಾರೈಸುತ್ತೇನೆ.

(ಯು.ಟಿ. ಖಾದರ್ ಫರೀದ್)



ಡಾ. ಎಂ.ಸಿ. ಸುಧಾಕರ್, ಎಂ.ಡಿ.ಎಸ್.
ಮಾಜಿ ಉನ್ನತ ಶಿಕ್ಷಣ ಸಚಿವರು ಹಾಗೂ
ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಸಂದೇಶ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಯುವಜನರಲ್ಲಿ ಶಿಸ್ತು, ಸೇವಾಭಾವ, ನಾಯಕತ್ವ ಮತ್ತು ರಾಷ್ಟ್ರಪ್ರೇಮದ ಮೌಲ್ಯಗಳನ್ನು ಬೆಳೆಸುವ ಮಹತ್ವದ ಚಳವಳಿಯಾಗಿದೆ. ಸಮಾಜಮುಖಿ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಈ ಸಂಸ್ಥೆ ನೀಡುತ್ತಿರುವ ಕೊಡುಗೆ ಶ್ಲಾಘನೀಯವಾದದ್ದು.

2026–27ನೇ ಸಾಲಿನ ವಾರ್ಷಿಕ ಕಾರ್ಯಕ್ರಮ ಯೋಜನೆ ರೂಪಿಸುವ ಮೂಲಕ ರಾಜ್ಯದ ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಪರಿಸರ ಜಾಗೃತಿ, ಸಾಮಾಜಿಕ ಹೊಣೆಗಾರಿಕೆ ಮತ್ತು ನಾಯಕತ್ವ ಗುಣಗಳನ್ನು ಮತ್ತಷ್ಟು ಬಲಪಡಿಸುವ ದಿಸೆಯಲ್ಲಿ ಮಹತ್ವದ ಹೆಜ್ಜೆಯನ್ನು ಇಟ್ಟಿರುವುದು ಉತ್ತಮ ನಿಲುವಾಗಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ನಿಟ್ಟಿನಲ್ಲಿ ರೂಪಿಸಲಾದ ಈ ಯೋಜನೆ, ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂಬ ವಿಶ್ವಾಸವಿದೆ. ಯುವಜನತೆಯನ್ನು ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪ್ರೇರೇಪಿಸುವಲ್ಲಿ ಈ ಕಾರ್ಯಕ್ರಮಗಳು ಪ್ರಮುಖ ಪಾತ್ರ ವಹಿಸಲಿವೆ.

ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಶ್ರಮಿಸುತ್ತಿರುವ ಎಲ್ಲಾ ಪದಾಧಿಕಾರಿಗಳು, ಶಿಕ್ಷಕರು, ಸ್ವಯಂ ಸೇವಕರು ಮತ್ತು ಸದಸ್ಯರಿಗೆ ಅಭಿನಂದನೆಗಳು ಹಾಗೂ ಹಾರ್ದಿಕ ಶುಭಾಶಯಗಳು.

(ಡಾ. ಎಂ.ಸಿ. ಸುಧಾಕರ್)



ಎಸ್. ಮಧು ಬಂಗಾರಪ್ಪ
ಮಾಜಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
ಹಾಗೂ
ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಸಂದೇಶ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯು ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಶಿಸ್ತು, ಪರಿಸರ ಪ್ರೇಮ, ಆತ್ಮವಿಶ್ವಾಸ, ಪ್ರಾಮಾಣಿಕತೆ, ಸ್ವಯಂಪ್ರಜ್ಞೆ, ಸೇವಾಮನೋಭಾವ, ಸಾಮಾಜಿಕ ಹಾಗೂ ವೈಯಕ್ತಿಕ ಹೊಣೆಗಾರಿಕೆಯನ್ನು ಕಲಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಸಂಸ್ಥೆಯು ಸಿದ್ಧಪಡಿಸಿರುವ 2026–27ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕದಲ್ಲಿರುವ ಸ್ಕೌಟ್–ಗೈಡ್ ಕಾರ್ಯಕ್ರಮಗಳು, ಚಟುವಟಿಕೆಗಳು, ತರಬೇತಿಗಳು ಮತ್ತು ಸೇವಾ ಶಿಬಿರಗಳು, ಕಬ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳ ಜ್ಞಾನ, ಕೌಶಲ್ಯ, ನಾಯಕತ್ವ ಗುಣಗಳ ಬೆಳವಣಿಗೆಯ ಜೊತೆಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಬಹಳಷ್ಟು ಪ್ರೋತ್ಸಾಹದಾಯಕವಾಗಿರುತ್ತದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು ಮುದ್ರಿಸುತ್ತಿರುವ ಈ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕವು, ಉಪಯುಕ್ತವಾದ ಮಾಹಿತಿಗಳೊಂದಿಗೆ, ಸುಂದರವಾಗಿ ಮೂಡಿಬರಲಿ ಹಾಗೂ ಕಬ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್‌ಗಳ ತರಬೇತಿಗಳು, ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು ಯುವ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಿರಲೆಂದು ಆಶಿಸುತ್ತಾ, ಎಲ್ಲಾ ಯೋಜಿತ ಕಾರ್ಯಕ್ರಮಗಳು ಯಶಸ್ವಿಯಾಗಲೆಂದು ಶುಭ ಹಾರೈಸುತ್ತೇನೆ.

(ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು



ವಿ. ರಶ್ಮಿ ಮಹೇಶ್, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಸಂದೇಶ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯು 2026–27ನೇ ಸಾಲಿನ ಸ್ಕೌಟ್ಸ್–ಗೈಡ್ಸ್ ಕಾರ್ಯಕ್ರಮಗಳು, ಚಟುವಟಿಕೆಗಳು, ತರಬೇತಿಗಳು, ಸಭೆಗಳು, ಸಮಾವೇಶಗಳು, ಶಿಬಿರಗಳು, ಸಮಾಲೋಚನೆ, ಸಮುದಾಯ ಸೇವೆ ಪರಿಸರ ಸಂರಕ್ಷಣೆ, ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರಗಳು, ಆರೋಗ್ಯ ಸೇವೆ, ಆಧುನಿಕ ಮತ್ತು ಸಾವಯವ ಕೃಷಿ ತಂತ್ರಜ್ಞಾನ, ಮಳೆ ನೀರಿನ ಕೊಯ್ಲು, ಯೋಗಶಿಕ್ಷಣ ರಾಷ್ಟ್ರೀಯ ಮತ್ತು ಜಾಗತಿಕ ದಿನಾಚರಣೆಗಳು, ಕಲೆ, ವಿವಿಧ ಸ್ಪರ್ಧೆಗಳು, ಹಿರಿಯರ ಸ್ಮರಣೆ, ಪ್ರತಿಭಾ ಪ್ರದರ್ಶನ ಮುಂತಾದ ವಿಶಿಷ್ಟ ಮತ್ತು ವಿಶೇಷ ಕಾರ್ಯಕ್ರಮಗಳ ಬಗ್ಗೆ ಯೋಜನಾ ಪುಸ್ತಕವನ್ನು ಮುದ್ರಿಸುತ್ತಿರುವುದು ಶ್ಲಾಘನೀಯವಾಗಿದೆ.

ಸಂಸ್ಥೆಯ ಚಟುವಟಿಕೆಗಳು, ತರಬೇತಿಗಳು, ಸೇವಾ ಕಾರ್ಯಕ್ರಮಗಳು ಶಾಲಾ–ಕಾಲೇಜುಗಳ ಕಬ್–ಬುಲ್‌ಬುಲ್ ಸ್ಕೌಟ್ಸ್ ಗೈಡ್ / ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳ ನಾಯಕತ್ವವನ್ನು ವೃದ್ಧಿಗೊಳಿಸಿ ಅವರ ಕೌಶಲ್ಯ ನಾಯಕತ್ವ ಮತ್ತು ಸೇವಾ ಮನೋಭಾವವನ್ನು ಹೆಚ್ಚಿಸಿಕೊಳ್ಳಲು ಬಹಳಷ್ಟು ಪೂರಕವಾಗಿದೆ.

ಸಂಸ್ಥೆಗೆ ಶುಭವನ್ನು ಹಾರೈಸುತ್ತೇನೆ.

ವಿ. ರಶ್ಮಿ

(ವಿ. ರಶ್ಮಿ ಮಹೇಶ್)

ಸಂಖ್ಯೆ:ಕಾಶಿಆ/01/ಆಆಶಾ/2026–27



ಮಂಜುಶ್ರೀ.ಎನ್, ಭಾ.ಆ.ಸೇ.
ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ

ಶುಭ ಸಂದೇಶ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ 2026–27ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನೆ ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ಸಂಘಟನೆಯ ಶ್ರೇಷ್ಠ ಉದ್ದೇಶಗಳು ಯುವಜನರ ವ್ಯಕ್ತಿತ್ವ ನಿರ್ಮಾಣದಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಬಾಲಕ–ಬಾಲಕಿಯರ ಶೈಕ್ಷಣಿಕ, ಸಾಮಾಜಿಕ ಹಾಗೂ ನೈತಿಕ ಬೆಳವಣಿಗೆಗೆ ನೀಡುತ್ತಿರುವ ಉತ್ತೇಜನವು ನಮ್ಮ ಸಮಾಜದ ಭವಿಷ್ಯವನ್ನು ಬಲಪಡಿಸುತ್ತದೆ.

ನಿಮ್ಮ ಕಾರ್ಯಕ್ರಮಗಳು ಹೆಚ್ಚಿನ ವಿದ್ಯಾರ್ಥಿಗಳನ್ನು ಸಕ್ರಿಯ ಪೌರರಾಗಿ ರೂಪಿಸುವಲ್ಲಿ ಯಶಸ್ವಿಯಾಗಲಿ ಎಂಬ ಹಾರೈಕೆಯೊಂದಿಗೆ ಈ ಪ್ರಯತ್ನಕ್ಕೆ ನನ್ನ ಹೃತ್ಪೂರ್ವಕ ಶುಭಾಶಯಗಳು.

Manjushri

(ಮಂಜುಶ್ರೀ.ಎನ್)



ಶ್ರೀ ಭರತ್ .ಎಸ್., ಭಾ.ಆ.ಸೇ.,
ನಿರ್ದೇಶಕರು
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)
ಕರ್ನಾಟಕ ಸರ್ಕಾರ

ಸಂದೇಶ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು ಶಾಲಾ ಹಾಗೂ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯಪ್ರಜ್ಞೆ, ನಾಯಕತ್ವ ಗುಣಗಳು, ಸ್ವಾವಲಂಬನೆ ಹಾಗೂ ಸೇವಾ ಮನೋಭಾವವನ್ನು ಬೆಳೆಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಿರುವ ಪ್ರತಿಷ್ಠಿತ ಸಂಸ್ಥೆಯಾಗಿದೆ. ಯುವಜನರಲ್ಲಿ ರಾಷ್ಟ್ರೀಯ ಏಕತೆ, ಸಾಮಾಜಿಕ ಜವಾಬ್ದಾರಿ, ಪರಿಸರ ಪ್ರಜ್ಞೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಸಂಸ್ಥೆಯು ನಿರಂತರವಾಗಿ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳು ಶ್ಲಾಘನೀಯವಾಗಿವೆ.

ಇಂದಿನ ಸಮಾಜದಲ್ಲಿ ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕ ಸಾಧನೆಗಷ್ಟೇ ಸೀಮಿತವಾಗದೆ, ಉತ್ತಮ ವ್ಯಕ್ತಿತ್ವ, ನಾಗರಿಕ ಪ್ರಜ್ಞೆ ಹಾಗೂ ಸಾಮಾಜಿಕ ಬದ್ಧತೆಯನ್ನು ಮೈಗೂಡಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವಿವಿಧ ತರಬೇತಿಗಳು, ಶಿಬಿರಗಳು ಮತ್ತು ಚಟುವಟಿಕೆಗಳು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿವೆ.

ಈ ಹಿನ್ನೆಲೆಯಲ್ಲಿ, 2026–27ನೇ ಸಾಲಿನ ಕಾರ್ಯಕ್ರಮಗಳ ಯೋಜನಾ ಪುಸ್ತಕದಲ್ಲಿ ಒಳಗೊಂಡಿರುವ ವಿವಿಧ ಚಟುವಟಿಕೆಗಳು, ತರಬೇತಿ ಕಾರ್ಯಕ್ರಮಗಳು ಹಾಗೂ ಸೇವಾ ಕಾರ್ಯಗಳು ರಾಜ್ಯದಾದ್ಯಂತ ಸ್ಕೌಟ್ಸ್, ಗೈಡ್ಸ್, ರೋವರಸ್ ಮತ್ತು ರೇಂಜರ್ಸ್‌ಗಳಿಗೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಿ, ಅವರ ವ್ಯಕ್ತಿತ್ವ ವಿಕಸನ ಹಾಗೂ ನಾಯಕತ್ವ ಸಾಮರ್ಥ್ಯವನ್ನು ಮತ್ತಷ್ಟು ವೃದ್ಧಿಸಲಿ ಎಂದು ಹಾರೈಸುತ್ತೇನೆ.

(ಶ್ರೀ ಭರತ್ .ಎಸ್.)
ನಿರ್ದೇಶಕರು
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)



ಆಶಯ ನುಡಿ

ನಿಶ್ಚಿತ ಪರಿಕಲ್ಪನೆ– ನಿರ್ದಿಷ್ಟ ಯೋಜನೆ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ 2026–27ನೆಯ ಸಾಲಿನ ಈ ಯೋಜನೆ ರೂಢಿಯ ಒಂದು ರೂಪದಂತಲ್ಲದೆ, ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಒಂದು ದರ್ಪಣದಂತಿದೆ ಎಂದು ನಾನು ಭಾವಿಸಿದ್ದೇನೆ.

ಸಾರ್ವಜನಿಕ ಸೇವೆಗೆ ಬದ್ಧವಾದ ಯಾವುದೇ ಸಂಘಟಿತ ವ್ಯವಸ್ಥೆಯ ಸುಗಮ ಕಾರ್ಯನಿರ್ವಹಣೆಗೆ ಮೊದಲ ಅಗತ್ಯವೆಂದರೆ ಮುನ್ನೋಟದ ಒಂದು ಕ್ರಿಯಾ ಯೋಜನೆ. ನಮ್ಮ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಸಂಸ್ಥೆ ಪ್ರತಿ ವರ್ಷ ಇಂತಹ ಕ್ರಿಯಾ ಯೋಜನೆ ರೂಪಿಸಿಕೊಂಡು ಕಾರ್ಯನಿರ್ವಹಿಸುತ್ತಿರುವುದು ಅಭಿಮಾನದ ಸಂಗತಿ.

ನಾನು ಗಮನಿಸಿದಂತೆ, 2026–27ನೆಯ ವರ್ಷದ ಈ ಯೋಜನೆಯು ಇದುವರೆಗಿನ ಅನುಭವಗಳ ಹಿನ್ನೆಲೆಯಲ್ಲಿ ಮತ್ತು ಮುಂದಿನ ವರ್ಷ ನಡೆಯಬೇಕಾದುದರ ನಿರೀಕ್ಷೆಯಲ್ಲಿ ನಡೆಸಿದ ಅತ್ಯಂತ ಗಂಭೀರ ಆಲೋಚನೆಯ ಫಲವಾಗಿದೆ. ಸ್ಥಳೀಯ ಹಂತದಿಂದ ರಾಜ್ಯ ಮಟ್ಟದವರೆಗಿನ ಅನುಷ್ಠಾನಗೊಳಿಸಬೇಕಾದ ತಿಂಗಳುವಾರು ಚಟುವಟಿಕೆಗಳನ್ನು ತಿಳಿಸಿರುವ ಈ ಸಲದ ಯೋಜನೆ ಹಿಂದಿನ ವರ್ಷಗಳ ಯೋಜನೆಗಳಿಗಿಂತ ಹೆಚ್ಚು ವಿಸ್ತೃತವಾಗಿದೆ ಎಂದು ನನಗನಿಸುತ್ತದೆ.

ನಮ್ಮ ರಾಜ್ಯ ಸಂಸ್ಥೆಯ ಮುಖ್ಯ ಆಯುಕ್ತರಾದ ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು, ವರ್ಷವಿಡೀ ರಾಜ್ಯಾದ್ಯಂತ ಪ್ರವಾಸಮಾಡಿ, ಕ್ಷೇತ್ರ ಚಟುವಟಿಕೆಗಳನ್ನು ಪ್ರತ್ಯಕ್ಷವಾಗಿ ಕಂಡು ಹಿಂದಿನ ವರ್ಷದ ಯೋಜನೆಯ ಪ್ರಕಾರ ಆಗಿರುವ ಅನುಷ್ಠಾನ ಮತ್ತು ಗಮನಕ್ಕೆ ಬಂದ ಕುಂದು–ಕೊರತೆಗಳನ್ನು ಪರಿಗಣಿಸಿ, ಸಂಸ್ಥೆಯ ರಾಜ್ಯ ಹಾಗೂ ಕ್ಷೇತ್ರ ಪದಾಧಿಕಾರಿಗಳೊಡನೆ ಪರ್ಯಾಲೋಚಿಸಿ, ಅತ್ಯಂತ ಕಾರ್ಯಸಾಧ್ಯವಾದ ಯೋಜನೆಯನ್ನೇ ನಮ್ಮ ಮುಂದೆ ಇಟ್ಟಿದ್ದಾರೆ.

ಈ ಯೋಜನೆಯಲ್ಲಿ, ವಿವಿಧ ಘಟಕಗಳ ನಿಬಂಧಿತ ಸಭೆಗಳು, ವಿವಿಧ ದಿನಾಚರಣೆಗಳು, ಸಮ್ಮೇಳನಗಳು, ತರಬೇತಿ ಶಿಬಿರಗಳು, ಸ್ಪರ್ಧೆಗಳು, ಕಾರ್ಯಾಗಾರಗಳು, ಸೇವಾ ಶಿಬಿರಗಳು, ಶೈಕ್ಷಣಿಕ ವಸ್ತು ಪ್ರದರ್ಶನಗಳು, ಪ್ರವಾಸಗಳು, ರಾಷ್ಟ್ರೀಯ– ಅಂತರಾಷ್ಟ್ರೀಯ ಆಚರಣೆಗಳು, ಕಲ್ಯಾಣ ಕರ್ನಾಟಕ– ಕಿತ್ತೂರು ಕರ್ನಾಟಕ ಜಾಂಬೂರೇಟ್‌ಗಳು, ಬೇಸಿಗೆ ಶಿಬಿರಗಳು, ಸರ್ಕಾರಿ ಮತ್ತು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಡನೆ ವಿಚಾರ ವಿನಿಮಯ– ಹೀಗೆ ಸ್ಕೌಟ್ ಮತ್ತು ಗೈಡ್ ಚಳುವಳಿಯ ಸಕ್ರಿಯಾಶೀಲತೆಗೆ ಅಗತ್ಯವಾದ ಒಟ್ಟು 200ಕ್ಕೂ ಹೆಚ್ಚು ಕಾರ್ಯಚಟುವಟಿಕೆಗಳನ್ನು ಗೊತ್ತು ಮಾಡಲಾಗಿದೆ.

"ಯಾವುದೇ ಯೋಜನೆಯನ್ನು ಪರಿಪೂರ್ಣವಾಗಿ ರೂಪಿಸಿದರೆ, ಅದರ ಕಾರ್ಯಾನುಷ್ಠಾನ ಅರ್ಧ ಮುಗಿದಂತೆ" ಎಂಬ ಮಾತಿದೆ. ಅದರಂತೆ, ಪ್ರಸ್ತುತ ಯೋಜನೆ ಅರ್ಧ ಕೆಲಸವನ್ನು ಮಾಡಿದೆ ಎಂದರೂ, ಅರ್ಧವೇ ಪೂರ್ಣವಲ್ಲ. ಅದು ಸಮರ್ಥವಾಗಿ ಅನುಷ್ಠಾನಗೊಂಡಾಗ ಮಾತ್ರ ಯೋಜನೆ ಸಂಪೂರ್ಣತೆ ಮತ್ತು ಸಾರ್ಥಕತೆ ಪಡೆಯುತ್ತದೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಈ ದೃಷ್ಟಿಯಿಂದ ನಮ್ಮ ರಾಜ್ಯ ಆಯುಕ್ತರು ತಮ್ಮ ಸಹ ಸೇವಾ ಬಂಧುಗಳ ಸಮಾಲೋಚನೆಯೊಂದಿಗೆ ಅಗಾಧ ಶ್ರಮವಹಿಸಿ, ಅಪಾರ ನಿರೀಕ್ಷೆಯಿಂದ ಸಿದ್ಧಪಡಿಸಿರುವ ಈ ಸಲದ ಯೋಜನೆಯನ್ನು ನಮ್ಮ ಚಳುವಳಿಯ ಎಲ್ಲ ಹಂತದ ಸ್ಕೌಟ್–ಗೈಡ್ ಬಂಧುಗಳು ಬದ್ಧತೆ ಮತ್ತು ಶ್ರದ್ಧಾ ನಿಷ್ಠೆಗಳಿಂದ ಅನುಷ್ಠಾನಗೊಳಿಸುವಂತಾಗಬೇಕೆಂದು ತಿಳಿಸುತ್ತೇನೆ.

ಸ್ಕೌಟ್ ಮತ್ತು ಗೈಡ್ ಚಳುವಳಿಯಲ್ಲಿ ನಮ್ಮ ರಾಜ್ಯ ಸಂಸ್ಥೆ ಈಗ ಗಳಿಸಿರುವ ರಾಷ್ಟ್ರಮನ್ನಣೆಯಷ್ಟೇ ಅಲ್ಲದೆ, ಜಾಗತಿಕ ಮನ್ನಣೆ ಪಡೆಯುವ ಬಗೆಗೆ ನನಗೆ ಪೂರ್ಣ ವಿಶ್ವಾಸವಿದೆ.

ಗೊ.ರು. ಚನ್ನಬಸಪ್ಪ
ಅಧ್ಯಕ್ಷರು, ಪ್ರಕಟಣಾ ಸಮಿತಿ

ಸ್ಥಳ: ಬೆಂಗಳೂರು



ರಾಜ್ಯ ಮುಖ್ಯ ಆಯುಕ್ತರ ನುಡಿ

ನನ್ನ ವಿಶ್ವಾಸದ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ನಮಸ್ಕಾರಗಳು,

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯು ಪ್ರತಿ ವರ್ಷ ತನ್ನ ಚಟುವಟಿಕೆಗಳು, ತರಬೇತಿಗಳು, ಹಾಗೂ ವಿವಿಧ ಕಾರ್ಯಕ್ರಮಗಳ ಸಮಗ್ರ ವಾರ್ಷಿಕ ಯೋಜನೆಯನ್ನು ಸಿದ್ದಪಡಿಸಿಕೊಂಡು ಅದರನ್ವಯ ರಾಜ್ಯಾದ್ಯಂತ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸುತ್ತಾ ಬಂದಿದೆ. ಈ ಕಾರ್ಯದಲ್ಲಿ ಕರ್ನಾಟಕ ಸರ್ಕಾರದ ನಿರಂತರ ಸಹಕಾರ, ಶಿಕ್ಷಣ ಇಲಾಖೆಯ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರೋತ್ಸಾಹ, ಪದಾಧಿಕಾರಿಗಳು ಮತ್ತು ನಾಯಕರ ಬದ್ಧತೆ, ಪೋಷಕರ ಉತ್ಸಾಹ ಹಾಗೂ ಮಕ್ಕಳ ಸಕ್ರಿಯ ಭಾಗವಹಿಸುವಿಕೆ ಮಹತ್ವದ ಪಾತ್ರ ವಹಿಸಿದೆ. ಈ ಎಲ್ಲರ ಸಹಕಾರದಿಂದಲೇ ನಮ್ಮ ಸಂಸ್ಥೆ ನಿರಂತರ ಬೆಳವಣಿಗೆ ಮತ್ತು ಸಾಧನೆಗಳತ್ತ ಮುನ್ನಡೆಯುತ್ತಿದೆ.

ಕಳೆದ 2025–26ನೇ ಸಾಲಿನಲ್ಲಿ ರಾಜ್ಯ ಸಂಸ್ಥೆ ರೂಪಿಸಿದ್ದ ವಾರ್ಷಿಕ ಕಾರ್ಯಯೋಜನೆಗಳ ಬಹುತೇಕ ಎಲ್ಲಾ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ಜರುಗಿರುವುದು ಸಂತೋಷದ ಸಂಗತಿಯಾಗಿದೆ. ತರಬೇತಿ, ಸೇವೆ, ಸಾಹಸ ಹಾಗೂ ಯುವ ಜನಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಸಕ್ರಿಯವಾಗಿ ಭಾಗವಹಿಸಿ ಗಮನಾರ್ಹ ಸಾಧನೆ ಮೆರೆದಿವೆ. ಭಾರತ ಸರ್ಕಾರದ ಮಹತ್ವಾಕಾಂಕ್ಷಿ "ಆಪದ್‌ಮಿತ್ರ" ಯೋಜನೆಯಲ್ಲಿಯೂ ನಮ್ಮ ಸ್ಕೌಟ್ಸ್,ಗೈಡ್ಸ್, ರೋವರ್ಸ್ –ರೇಂಜರ್ಸ್‌ಗಳು ಉತ್ಸಾಹದಿಂದ ಭಾಗವಹಿಸಿ ವಿಪತ್ತು ನಿರ್ವಹಣೆ ಮತ್ತು ತುರ್ತುಸೇವೆಗಳ ಕುರಿತ ವಿಶೇಷ ತರಬೇತಿಯನ್ನು ಪಡೆದುಕೊಂಡಿರುವುದು ಹೆಮ್ಮೆಯ ವಿಷಯವಾಗಿದೆ.

ಬೆಳಗಾವಿಯಲ್ಲಿ ಆಯೋಜಿಸಲಾದ ರಾಜ್ಯಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೂರೇಟ್ ಅತ್ಯಂತ ಯಶಸ್ವಿಯಾಗಿ ನೆರವೇರಿದ್ದು, ಯುವಜನರಲ್ಲಿ ನಾಯಕತ್ವ, ಶಿಸ್ತು ಹಾಗೂ ರಾಷ್ಟ್ರೀಯ ಏಕತೆಯ ಮೌಲ್ಯಗಳನ್ನು ಬಲಪಡಿಸಿದೆ. ಜೊತೆಗೆ ವಿವಿಧ ವಿಶ್ವವಿದ್ಯಾಲಯಗಳಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಘಟಕಗಳ ಆರಂಭಕ್ಕೆ ದೊರೆತಿರುವ ಪ್ರೋತ್ಸಾಹವು ಚಳುವಳಿಯ ವಿಸ್ತರಣೆಗೆ ಹೊಸ ದಿಕ್ಕನ್ನು ನೀಡಿದೆ. ನಿರಂತರ ಪ್ರಗತಿಯ ಹಾದಿಯಲ್ಲಿ ಸಾಗುತ್ತಿರುವ ನಮ್ಮ ಸಂಸ್ಥೆಯು 2025–26ನೇ ಸಾಲಿನಲ್ಲಿ ಸುಮಾರು 8.5 ಲಕ್ಷ ಗಣತಿಯನ್ನು ತಲುಪುವ ಮೂಲಕ ಗಮನಾರ್ಹ ಸಾಧನೆ ದಾಖಲಿಸಿದೆ. ಈ ಬೆಳವಣಿಗೆಯಲ್ಲಿ ವಾರ್ಷಿಕ ಕಾರ್ಯಕ್ರಮಗಳ ಯೋಜನೆ ಪುಸ್ತಕವು ಮಹತ್ತರ ಪಾತ್ರ ವಹಿಸಿದೆ ಎಂಬುದು ನನ್ನ ದೃಢ ನಂಬಿಕೆಯಾಗಿದೆ.

ಸ್ಕೌಟಿಂಗ್ ಮತ್ತು ಗೈಡಿಂಗ್ ಕೇವಲ ಒಂದು ಚಟುವಟಿಕೆಗೆ ಅಲ್ಲ ; ಅದು ಸೇವೆ, ಶಿಸ್ತು, ನಾಯಕತ್ವ, ಸ್ವಾವಲಂಬನೆ ಮತ್ತು ರಾಷ್ಟ್ರಪ್ರೇಮದ ಮೌಲ್ಯಗಳನ್ನು ಬೆಳೆಸುವ ಜೀವನಶೈಲಿಯಾಗಿದೆ. 2026–27ನೇ ಸಾಲಿನ ವಾರ್ಷಿಕ ಯೋಜನೆಗಳು ಚಳುವಳಿಯ ಸಂಪ್ರದಾಯ ಮತ್ತು ಮೌಲ್ಯಗಳನ್ನು ಉಳಿಸಿಕೊಂಡು, ಹೊಸ ಆಲೋಚನೆಗಳು, ನವೀನತೆಗಳು ಹಾಗೂ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಯುವಜನರನ್ನು ಭವಿಷ್ಯದ ಸವಾಲುಗಳಿಗೆ ಸಜ್ಜುಗೊಳಿಸಲು ಪೂರಕವಾಗಬೇಕೆಂಬುದು ನಮ್ಮ ಉದ್ದೇಶವಾಗಿದೆ.

ಈ ವಾರ್ಷಿಕ ಯೋಜನೆಗಳ ಪುಸ್ತಕವು ಕೇವಲ ಕಾರ್ಯಕ್ರಮಗಳ ವೇಳಾಪಟ್ಟಿಯಲ್ಲ ; ಇದು ರಾಜ್ಯದ ಎಲ್ಲಾ ಘಟಕಗಳಿಗೆ ಮಾರ್ಗದರ್ಶಕ ದಾಖಲೆಯಾಗಿದೆ. ಈ ಪುಸ್ತಕದಲ್ಲಿನ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ ಇನ್ನಷ್ಟು ಮಕ್ಕಳನ್ನು ಮತ್ತು ಯುವಜನರನ್ನು ಚಳುವಳಿಗೆ ಸೆಳೆಯುವ ಕಾರ್ಯವನ್ನು ಎಲ್ಲರೂ ಕೈಗೊಳ್ಳಬೇಕೆಂದು ನಾನು ಅಶಿಸುತ್ತೇನೆ.

ಈ ಪುಸ್ತಕಕ್ಕೆ ಕರ್ನಾಟಕ ವಿಧಾನಸಭೆಯ ಮಾನ್ಯ ಸಭಾಧ್ಯಕ್ಷರು, ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಮಾನ್ಯ ಉನ್ನತ ಶಿಕ್ಷಣ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು, ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಹಾಗೂ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರುಗಳು ನೀಡಿರುವ ಪ್ರೋತ್ಸಾಹದಾಯಕ ಸಂದೇಶಗಳು ನಮ್ಮ ಚಳುವಳಿಗೆ ಮತ್ತಷ್ಟು ಸ್ಫೂರ್ತಿ ತುಂಬಿವೆ. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆಗಳ ರೂಪುರೇಷೆಗಳನ್ನು ಸಿದ್ದಪಡಿಸಲು ಶ್ರಮಿಸಿದ ನಮ್ಮ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು, ಆಯುಕ್ತರು, ತರಬೇತುದಾರರು ಹಾಗೂ ಸಿಬ್ಬಂದಿಯನ್ನು ಅಭಿನಂದಿಸುತ್ತೇನೆ. ಸೇವೆ, ಶಿಸ್ತು ಮತ್ತು ನಾಯಕತ್ವದ ಆದರ್ಶಗಳೊಂದಿಎ 2026–27ನೇ ಸಾಲಿನಲ್ಲಿ ಮತ್ತಷ್ಟು ಸಾಧನೆಗಳು ಹಾಗೂ ಹೊಸ ಮೈಲಿಗಲ್ಲುಗಳನ್ನು ನಿರ್ಮಿಸುವತ್ತ, ಈ ಯೋಜನಾ ಪುಸ್ತಕ ಮಾರ್ಗದರ್ಶಿಯಾಗಲೆಂದು ಆಶಿಸುತ್ತೇನೆ.

ಎಲ್ಲರಿಗೂ ಶುಭವಾಗಲಿ.

ತಮ್ಮ ವಿಶ್ವಾಸಿ

(ಡಾ.ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಪರಿವಿಡಿ

1. ರಾಜ್ಯ ಮಟ್ಟದ ಪಥಸಂಚಲನ ಕಾರ್ಯಕ್ರಮದಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದ ಪ್ರಯುಕ್ತ ತಂಡದ ನಾಯಕಿಗೆ ಪ್ರಶಸ್ತಿ ಪ್ರದಾನ ...01

2. ಸಂದೇಶಗಳು ...03

3. ಆಶಯ ನುಡಿ ...11

4. ರಾಜ್ಯ ಮುಖ್ಯ ಆಯುಕ್ತರ ನುಡಿ ...13

5. 2026–27ನೇ ಸಾಲಿನ ಕಾರ್ಯಕ್ರಮಗಳು, ಚಟುವಟಿಕೆಗಳು, ತರಬೇತಿಗಳು (ತಿಂಗಳ ಧ್ಯೇಯ ವಾಕ್ಯದೊಂದಿಗೆ)

   ಏಪ್ರಿಲ್–ಮೇ 2026 ...14

   ಜೂನ್ 2026 ...19

   ಜುಲೈ 2026 ...24

   ಆಗಸ್ಟ್ 2026 ...28

   ಸೆಪ್ಟೆಂಬರ್ 2026 ...31

   ಅಕ್ಟೋಬರ್ 2026 ...34

   ನವಂಬರ್ 2026 ...39

   ಡಿಸೆಂಬರ್ 2026 ...42

   ಜನವರಿ 2027 ...44

   ಫೆಬ್ರವರಿ 2027 ...46

   ಮಾರ್ಚ್ 2027 ...47

   ಏಪ್ರಿಲ್–ಮೇ 2027 ...48

6. ದಳವನ್ನು ಪ್ರಾರಂಭಿಸಿ ನಡೆಸುವ ಬಗ್ಗೆ ಮಾಹಿತಿ ...51

7. ಬಾಲಕ–ಬಾಲಕಿಯರ ಮತ್ತು ಯುವಕ–ಯುವತಿಯರ ಪ್ರಗತಿಪರ ಶಿಕ್ಷಣ

   ಎ.ಪಿ.ಆರ್.ಓ. ಭಾಗ–2 & 3ರ ಪ್ರಕಾರ ಪಠ್ಯ ವಿಷಯ ...53

8. ಮುಕ್ತ ದಳಗಳು ...57

9. ಪ್ರಗತಿಪರ ಶಿಕ್ಷಣ ...58

10. ಓ.ವೈ.ಎಂ.ಎಸ್. ಬಗ್ಗೆ ಮಾಹಿತಿ ...60

11. ಯೋಗ ಪ್ರಾಣ ವಿದ್ಯಾ ಸಾಧನ ...62

THE BHARAT SCOUTS AND GUIDES, KARNATAKA

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

2026–27ನೇ ಸಾಲಿನ ಯುವ ಕಾರ್ಯಕ್ರಮಗಳು, ಚಟುವಟಿಕೆಗಳು
ಮತ್ತು ವಯಸ್ಕ ನಾಯಕರುಗಳ ತರಬೇತಿಗಳು

APRIL-MAY / ಏಪ್ರಿಲ್–ಮೇ 2026 ಮಾಹೆಯಲ್ಲಿ ಜರುಗಿದ ಕಾರ್ಯಕ್ರಮಗಳು

ಧ್ಯೇಯ: ಬೇಸಿಗೆ ಶಿಬಿರದಲ್ಲಿ ಸ್ಕೌಟ್ಸ್–ಗೈಡ್ಸ್ ಬೆಳವಣಿಗೆ











UNIT LEVEL PROGRAMME / ದಳ ಮಟ್ಟದ ಕಾರ್ಯಕ್ರಮ

Sl. ಕ್ರ. No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ಇಂದ	To/ಗೆ	Section/ ವಿಭಾಗ	Venue/ಸ್ಥಳ
1	Unit Level Summer Camp – SDG-4 ದಳಮಟ್ಟದ ಬೇಸಿಗೆ ಶಿಬಿರ	April-May 2026 / ಏಪ್ರಿಲ್–ಮೇ–2026		All Section ಎಲ್ಲಾ ವಿಭಾಗ	Unit Level ದಳ ಹಂತಗಳಲ್ಲಿ
2	Back to the School ಮರಳಿ ಶಾಲೆಗೆ ಸೇರ್ಪಡೆಗೊಳ್ಳುವುದು ಶಾಲಾರಂಭದ ಸಮಯದಲ್ಲಿ ಮಕ್ಕಳಿಗೆ ಚಿಕ್ಕ ಪ್ಯಾಕೇಟ್‌ಗಳಲ್ಲಿ ಹೂ ಮತ್ತು ಹಣ್ಣಿನ ಬೀಜ ಮತ್ತು ಚಾಕೋಲೇಟ್‌ಗಳನ್ನು ಸಂಸ್ಥೆಯ ಮೊಹರಿನೊಂದಿಗೆ ನೀಡುವುದುಸ್ವಾಗತಿಸುವುದು	April-May 2026 / ಏಪ್ರಿಲ್ – ಮೇ – 2026		All Section ಎಲ್ಲಾ ವಿಭಾಗ	Unit Level ದಳ ಹಂತಗಳಲ್ಲಿ

Local Association Programme/ ಸ್ಥಳೀಯ ಸಂಸ್ಥೆಯ ಕಾರ್ಯಕ್ರಮ

Sl. ಕ್ರ. No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ಇಂದ	To/ಗೆ	Section/ ವಿಭಾಗ	Venue/ಸ್ಥಳ
1	L.A. Council Meeting ಸ್ಥಳೀಯ ವಾರ್ಷಿಕ ಮಹಾಸಭೆ (ಪರಿಷತ್ ಸಭೆ) ವಾರ್ಷಿಕ ಮಹಾಸಭೆ ಕಡ್ಡಾಯ	April-May 2026 / ಏಪ್ರಿಲ್–ಮೇ – 2026		Committee Member	L.A. Level ಸ್ಥಳೀಯ ಮಟ್ಟ

District Association Programme/ಜಿಲ್ಲಾ ಸಂಸ್ಥೆಯ ಕಾರ್ಯಕ್ರಮ

Sl. ಕ್ರ. No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ಇಂದ	To/ಗೆ	Section/ ವಿಭಾಗ	Venue/ಸ್ಥಳ
1	District Executive Committee Meeting ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆ	April-May 2026 / ಏಪ್ರಿಲ್ – ಮೇ – 2026		Committee Member	District Level ಜಿಲ್ಲಾ ಮಟ್ಟ
2	Tritiya Sopan Scout & Guides Testing Camp ಸ್ಕೌಟ್ಸ್‌ಗೈಡ್ಸ್‌ಗಳಿಗೆತೃತೀಯ ಸೋಪಾನ ಪರೀಕ್ಷಾ ಶಿಬಿರ	April-May 2026 / ಏಪ್ರಿಲ್– ಮೇ – 2026		S/G ಸ್ಕೌ/ಗೈ	District Level ಜಿಲ್ಲಾ ಮಟ್ಟ
3	Rajyapuraskar Preparatory Camp for Scouts, Guides, Rovers and Rangers ರಾಜ್ಯಪುರಸ್ಕಾರ ಪೂರ್ವಸಿದ್ಧತಾ ಶಿಬಿರ ಸ್ಕೌಟ್ಸ್, ಗೈಡ್ಸ್, ರೋವರ್–ರೇಂಜರ್	April-May,June 2026 / ಏಪ್ರಿಲ್– ಮೇ, ಜೂನ್ – 2026		S/G/ Ro/Ra ಸ್ಕೌ/ಗೈ/ರೋ/ರೇಂ	District Level ಜಿಲ್ಲಾ ಮಟ್ಟ
4	L.A & D.A President, Secretaries, ADC & Office Bearers Meeting ಸ್ಥಳೀಯ ಸಂಸ್ಥೆ & ಜಿಲ್ಲಾ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ಎಡಿಸಿ & ಪದಾಧಿಕಾರಿಗಳ ಸಭೆ	April-May,June 2026 / ಏಪ್ರಿಲ್–ಮೇ, ಜೂನ್– 2026		Office Bearers ಪದಾಧಿಕಾರಿಗಳು	District Level ಜಿಲ್ಲಾ ಮಟ್ಟ

State Association Programmes/ರಾಜ್ಯ ಸಂಸ್ಥೆಯ ಯುವ ಕಾರ್ಯಕ್ರಮಗಳು ಮತ್ತು ರೋವರ್ಸ್ & ರೇಂಜರ್ಸ್ ಚಟುವಟಿಕೆಗಳು

Sl. ಕ್ರ. No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ ಇಂದ	To/ಗೆ	Section/ ವಿಭಾಗ	Venue/ಸ್ಥಳ
1	ASOC/ DO/SGV/DOC/DOT'S Meeting ಎಎಸ್‌ಒಸಿ/ಡಿಒ/ಎಸ್‌ಜಿವಿ/ಡಿಒಸಿ/ಡಿಒಟಿಗಳಿಗೆ ಸಭೆ	2th to 4th April 2026		Organisers ಸಂಘಟಕರು	SHQ, B'lore ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು
2	State Executive Committee Meeting ರಾಜ್ಯ ಕಾರ್ಯಕಾರಿ ಸಮಿತಿ ಸಭೆ	03.04.2026		Committee Member	SHQ, B'lore ರಾ.ಕೇಂ.ಕಛೇರಿ, ಬೆಂಗಳೂರು
3	2026-27 Annual Programme Plan Meeting 2026 –27ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನಾ ಸಭೆ State Programme, Training, Adult Resource, Publication, Trust, Finance, Equipment and Development Committee Meeting ರಾಜ್ಯ ಕಾಯಕ್ರಮ, ತರಬೇತಿ, ವಯಸ್ಕ ಸಂಪನ್ಮೂಲ, ಪ್ರಕಟಣ, ಟ್ರಸ್ಟ್, ಹಣಕಾಸು, ಸಾಮಗ್ರಿ ಮಳಿಗೆ ಮತ್ತು ಅಭಿವೃದ್ಧಿ ಸಮಿತಿಗಳ ಸಭೆ	April/May 2026 ಏಪ್ರಿಲ್–ಮೇ– 2026		Committee Member	State Level ರಾಜ್ಯ ಮಟ್ಟ
4	VISION – 2034 - DCC, DC(S&G), District Secreries, DTC, & L.A. Secretaries Meet ವಿಜನ್ – 2034 – ಜಿಲ್ಲಾ ಮುಖ್ಯ ಆಯುಕ್ತರು, ಸ್ಕೌಟ್–ಗೈಡ್ ಆಯುಕ್ತರು, ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ತರಬೇತಿ ಆಯುಕ್ತರುಗಳ ಸಮಾವೇಶ	May - 2026 ಮೇ – 2026		Office Bearers ಪದಾಧಿಕಾರಿಗಳು	S.T.C, D.Bpura ರಾಜ್ಯ ತರಬೇತಿ, ಕೇಂದ್ರ, ದೊಡ್ಡಬಳ್ಳಾಪುರ
5	State Level Trekking, Nature Study, Swaccha Bharath Camp ರಾಜ್ಯ ಮಟ್ಟದ ಚಾರಣ, ಪ್ರಕೃತಿ ಅಧ್ಯಯನ, ಸ್ವಚ್ಛತಾ ಶಿಬಿರ	30.03.2026 ರಿಂದ	02.04.2026	Senior S-G ಹಿರಿಯ ಸ್ಕೌಟ್ಸ್ – ಗೈಡ್ಸ್ ರೋವರ್ಸ್–ರೇಂಜರ್ಸ್ Rovers-Rangers	Udupi ಉಡುಪಿ
6	State Level Sahithya Kammata Camp ಸಾಹಿತ್ಯ ಕಮ್ಮಟ ಶಿಬಿರ	11.04.2026 ರಿಂದ	13.04.2026	Senior S-G ಹಿರಿಯ ಸ್ಕೌಟ್ಸ್–ಗೈಡ್ಸ್ Rovers-Rangers	Hassan ಹಾಸನ
7	State Level Agricutural & Harticutural Training Camp ರಾಜ್ಯ ಮಟ್ಟದ ಕೃಷಿ ಮತ್ತು ತೋಟಗಾರಿಕಾ ತರಬೇತಿ ಶಿಬಿರ	12.04.2026 ರಿಂದ	16.04.2026	Senior S-G ಹಿರಿಯ ಸ್ಕೌಟ್ಸ್–ಗೈಡ್ಸ್ ರೋವರ್ಸ್–ರೇಂಜರ್ಸ್ Rovers-Rangers	Shivamogga ಶಿವಮೊಗ್ಗ
8	State Level Pipe Band Training Camp ರಾಜ್ಯ ಮಟ್ಟದ ಪೈಪ್ ಬ್ಯಾಂಡ್ ತರಬೇತಿ ಶಿಬಿರ	20.04.2026 ರಿಂದ	26.04.2026	Senior S-G ಹಿರಿಯ ಸ್ಕೌಟ್ಸ್–ಗೈಡ್ಸ್ ರೋವರ್ಸ್–ರೇಂಜರ್ಸ್	Davanagere ದಾವಣಗೆರೆ
9	State Level Riffal & Archury & Adventure & Nature Study Activiey Camp ರೈಫಲ್ ಮತ್ತು ಆರ್ಚರಿ ತರಬೇತಿ ಶಿಬಿರ ಮತ್ತು ಸಾಹಸ & ಪ್ರಕೃತಿ ಅಧ್ಯಯನ ಚಟುವಟಿಕೆ ಶಿಬಿರ	25.04.2026 ರಿಂದ	29.04.2026	Senior S-G ಹಿರಿಯ ಸ್ಕೌಟ್ಸ್–ಗೈಡ್ಸ್ ರೋವರ್ಸ್–ರೇಂಜರ್ಸ್	S.T.C, Kondajji ರಾಜ್ಯ ತರಬೇತಿ, ಕೇಂದ್ರ, ಕೊಂಡಜ್ಜಿ

10	Registration for Rashpathi Award Application (Online) ರಾಷ್ಟ್ರಪತಿ ಪ್ರಶಸ್ತಿಗೆ ನೊಂದಣಿ(ಆನ್‌ಲೈನ್)			
11	State Level Siri Culture, Spiritual, Yoga Training Camp ರಾಜ್ಯ ಮಟ್ಟದ ರೇಷ್ಮೆ, ಆಧ್ಯಾತ್ಮಿಕ, ಯೋಗ ತರಬೇತಿ ಶಿಬಿರ	28.04.2026 ರಿಂದ 2.05.2026	Senior S-G ಹಿರಿಯ ಸ್ಕೌಟ್ಸ್–ಗೈಡ್ಸ್ ರೋವರ್–ರೇಂಜರ್	Doddamaralavadi , Ramanagara ದೊಡ್ಡಮರುಳವಾಡಿ, ರಾಮನಗರ
12	State Level Cartoon & Artist Training Camp ರಾಜ್ಯ ಮಟ್ಟದ ಕಾರ್ಟೂನ್ ಮತ್ತು ಆರ್ಟಿಸ್ಟ್ ತರಬೇತಿ ಶಿಬಿರ	03.05.2026 ರಿಂದ 06.05.2026	Senior S-G ಹಿರಿಯ ಸ್ಕೌಟ್ಸ್–ಗೈಡ್ಸ್ ರೋವರ್ಸ್–ರೇಂಜರ್ಸ್	S.T.C, D.B.Pura ರಾಜ್ಯ ತರಬೇತಿ, ಕೇಂದ್ರ, ದೊಡ್ಡಬಳ್ಳಾಪುರ
14	State Level Yoga, Home Medicine & Nutrition Food information Camp ರಾಜ್ಯ ಮಟ್ಟದ ಯೋಗ, ಪ್ರಕೃತಿ ಚಿಕಿತ್ಸೆ, ಪೌಷ್ಟಿಕ ಆಹಾರ ಮಾಹಿತಿ ಶಿಬಿರ	04.05.2026 ರಿಂದ 08.05.2026	Senior S-G ಹಿರಿಯ ಸ್ಕೌಟ್ಸ್ಗೈಡ್ಸ್ ರೋವರ್ಸ್–ರೇಂಜರ್ಸ್	Dakshina Kannada ದಕ್ಷಿಣ ಕನ್ನಡ
16	State Level Pioneering & Survival Camp ರಾಜ್ಯ ಮಟ್ಟದ ಪಯೋನಿಯರಿಂಗ್ ಹಾಗೂ ಸರ್ವೈವಲ್ ಶಿಬಿರ	07.05.2026 ರಿಂದ 11.05.2026	Senior S-G ಹಿರಿಯ ಸ್ಕೌಟ್ಸ್–ಗೈಡ್ಸ್ ರೋವರ್ಸ್–ರೇಂಜರ್ಸ್	S.T.C, Kondajji ರಾಜ್ಯ ತರಬೇತಿ, ಕೇಂದ್ರ,
17	State Level Nature Study & Trekking Camp ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ & ಚಾರಣ ಶಿಬಿರ	16.05.2026 ರಿಂದ 20.05.2026	Senior S-G ಹಿರಿಯ ಸ್ಕೌಟ್ಸ್–ಗೈಡ್ಸ್ ರೋವರ್ಸ್ – ರೇಂಜರ್ಸ್	Dakshina Kannada ದಕ್ಷಿಣ ಕನ್ನಡ
18	State Level Mapping & Star Gazing Camp ರಾಜ್ಯ ಮಟ್ಟದ ನಕ್ಷತ್ರ ವೀಕ್ಷಣೆ & ಮ್ಯಾಪಿಂಗ್ ಶಿಬಿರ	28.04.2026 to 01.05.2026	Senior S-G ಹಿರಿಯ ಸ್ಕೌಟ್ಸ್–ಗೈಡ್ಸ್ ರೋವರ್ಸ್ – ರೇಂಜರ್ಸ್	S.T.C, D.B.Pura ರಾಜ್ಯ ತರಬೇತಿ, ಕೇಂದ್ರ, ದೊಡ್ಡಬಳ್ಳಾಪುರ
19	State Level Swimming Training Camp ರಾಜ್ಯ ಮಟ್ಟದ ಈಜು ತರಬೇತಿ ಶಿಬಿರ	May 2026 / ಮೇ – 2026	Senior S-G ಹಿರಿಯ ಸ್ಕೌಟ್ಸ್ಗೈಡ್ಸ್ ರೋವರ್ಸ್ – ರೇಂಜರ್ಸ್	Basavanagudi Bengaluru ಬಸವನಗುಡಿ, ಬೆಂಗಳೂರು
20	State Level Bhaghavathgeethe/ Kuran/Baibal information Camp ರಾಜ್ಯ ಮಟ್ಟದ ಭಗವತ್‌ಗೀತೆ/ಕುರಾನ್/ ಬೈಬಲ್ ಮಾಹಿತಿ ಶಿಬಿರ	May 2026 / ಮೇ – 2026	Senior S-G ಹಿರಿಯ ಸ್ಕೌಟ್ಸ್–ಗೈಡ್ಸ್ ರೋವರ್ಸ್ – ರೇಂಜರ್ಸ್	Udupi ಉಡುಪಿ
21	State Level Youth Committee Members Workshop ರಾಜ್ಯ ಮಟ್ಟದ ಯುವ ಸಮಿತಿ ಸದಸ್ಯರ ಕಾರ್ಯಾಗಾರ	May 2026 / ಮೇ – 2026	Youth Committee Members ಯುವ ಸಮಿತಿ ಸದಸ್ಯರು	SHQ, B'lore ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು
22	2025-26 - Felicitation to SSLC/PUC Toppers 2025–26ನೇ ಸಾಲಿನಲ್ಲಿ ಪ್ರತಿಭಾನ್ವಿತ ಎಸ್‌ಎಸ್‌ಎಲ್‌ಸಿ & ಪಿ.ಯುಸಿ ಸ್ಕೌಟ್/ಗೈಡ್ ರೋ/ರೇಂಗಳಿಗೆ ಅಭಿನಂದನಾ ಸಮಾರಂಭ	May 2026 / ಮೇ – 2026	S/G/ Ro/Ra ಸ್ಕೌ/ಗೈ/ರೋ/ರೇಂ	Udupi ಉಡುಪಿ

24	State Level Proficiency Badge Examiner and Instructors Training Course ರಾಜ್ಯ ಮಟ್ಟದ ಬ್ಯಾಡ್ಜ್ ಪರೀಕ್ಷಕರ ಮತ್ತು ಬೋಧಕರ ತರಬೇತಿ ಶಿಬಿರ	April/May 2026 ಏಪ್ರಿಲ್–ಮೇ– 2026	Unit Leaders ದಳನಾಯಕರು	S.T.C, D.B.Pura ರಾಜ್ಯ ತರಬೇತಿ, ಕೇಂದ್ರ, ದೊಡ್ಡಬಳ್ಳಾಪುರ
25	State Level Costal Treking Camp ರಾಜ್ಯ ಮಟ್ಟದ ಕಡಲತೀರ ಚಾರಣ ಶಿಬಿರ	02.05.2026 ರಿಂದ 05.05.2026	Senior S-G ಹಿರಿಯ ಸ್ಕೌಟ್ಸ್-ಗೈಡ್ಸ್ Rovers-Rangers	**Udupi** ಉಡುಪಿ

State Level Adult Training Courses/ರಾಜ್ಯ ಮಟ್ಟದ ವಯಸ್ಕ ನಾಯಕರ ತರಬೇತಿ ಶಿಬಿರಗಳು

Sl. ಕ್ರ No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ ಇಂದ	To/ಗೆ	Section/ ವಿಭಾಗ	Venue/ಸ್ಥಳ
1	Presenting the Certificate, Beeds & Pin to HWB Holders ಹಿಮಾಲಯ ವೃಕ್ಷಮಣಿಧಾರಕರಿಗೆ ಪ್ರಮಾಣ ಪತ್ರ, ಬೀಡ್ಸ್ ಮತ್ತು ಪಿನ್ ವಿತರಣಾ ಸಮಾರಂಭ	**03.04.2026**		Adult Leaders ವಯಸ್ಕ ನಾಯಕರು	SHQ, B'lore ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು
2	State Level Basic & Advanced Training Course for Rover Scout Leaders and Ranger Leaders ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್ ತರಬೇತಿ ಶಿಬಿರಗಳು	**15 ರಿಂದ 21 ಏಪ್ರಿಲ್ 2026ರ ವರೆಗೆ**		Unit Leaders ದಳನಾಯಕರು	S.T.C, D.B.Pura ರಾಜ್ಯ ತರಬೇತಿ, ಕೇಂದ್ರ, ದೊಡ್ಡಬಳ್ಳಾಪುರ
3	State Level Camp Fire Training Course ರಾಜ್ಯ ಮಟ್ಟದ ಶಿಬಿರಾಗ್ನಿ ತರಬೇತಿ ಶಿಬಿರ	April/May 2026 ಏಪ್ರಿಲ್–ಮೇ– 2026		Unit Leaders ದಳನಾಯಕರು	S.T.C, D.B.Pura ರಾಜ್ಯ ತರಬೇತಿ, ಕೇಂದ್ರ, ದೊಡ್ಡಬಳ್ಳಾಪುರ
4	State Level Basic Training Course for C.M/F.L/SM/GC ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ	April/May 2026 ಏಪ್ರಿಲ್–ಮೇ– 2026		CM/FL/SM/GC ಕ.ಮಾ/ ಫ್ಲಾಕ್.ಲೀ/ ಸ್ಕೌ.ಮಾ/ ಗೈ.ಕ್ಯಾ. ರೋ.ಸ್ಕೌ.ಲೀ & ರೇಂ.ಲೀ	S.T.C, D.B.Pura ರಾಜ್ಯ ತರಬೇತಿ, ಕೇಂದ್ರ, ದೊಡ್ಡಬಳ್ಳಾಪುರ
5	State Level Secretaries Course ರಾಜ್ಯ ಮಟ್ಟದ ಕಾರ್ಯದರ್ಶಿಗಳ ತರಬೇತಿ ಶಿಬಿರ	April/May 2026 ಏಪ್ರಿಲ್–ಮೇ– 2026		Secretaries ಕಾರ್ಯದರ್ಶಿಗಳ	S.T.C, D.B.Pura ರಾಜ್ಯ ತರಬೇತಿ, ಕೇಂದ್ರ, ದೊಡ್ಡಬಳ್ಳಾಪುರ
6	State Level Basic & Advanced Training Course RSL & RL ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ	April/May 2026 ಏಪ್ರಿಲ್– ಮೇ–2026		RSL & RL ರೋ.ಸ್ಕೌ.ಲೀ & ರೇಂ.ಲೀ	S.T.C, D.B.Pura ರಾಜ್ಯ ತರಬೇತಿ, ಕೇಂದ್ರ, ದೊಡ್ಡಬಳ್ಳಾಪುರ

JUNE / ಜೂನ್ 2025

ಧ್ಯೇಯ: ಹಸಿರೇ ಉಸಿರು







UNIT LEVEL PROGRAMME / ದಳ ಮಟ್ಟದ ಕಾರ್ಯಕ್ರಮಗಳು

Sl. ಕ್ರ. No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ಇಂದ	To/ಗೆ	Section/ ವಿಭಾಗ	Venue/ಸ್ಥಳ
1	World Enviranment Day – SDG No.-13 ಪರಿಸರ ದಿನಾಚರಣೆ Activity Pack: Scouts-Guides walk towards Agriculture (Preparing Seed Ball, Planting of Saplings, Organic Agriculture) ಸ್ಕೌಟ್-ಗೈಡ್ ನಡಿಗೆ ಕೃಷಿಯ ಕಡೆಗೆ (ಸೀಡ್ ಬಾಲ್, ಸಾವಯವ ಕೃಷಿ, ಮಾರ್ಗದರ್ಶನ, ಗಿಡನೆಡುವ ಕಾರ್ಯಕ್ರಮ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ/ಅರಣ್ಯ ಇಲಾಖೆಯ ಸಹಯೋಗದಲ್ಲಿ ನೆರವೇರಿಸಲಾಗುವುದು)	05.06.2026 June/ಜೂನ್-2026		All Section ಎಲ್ಲಾ ವಿಭಾಗ	All Level ಎಲ್ಲಾ ಹಂತಗಳಲ್ಲಿ
2	Yoga Day - SDG No.3 (Yoga Week) ಯೋಗ ದಿನಾಚರಣೆ (ಒಂದು ವಾರ)	21.06.2026 June/ಜೂನ್-2026 (14 th to 21st June 2026)		All Section	All Level ಎಲ್ಲಾ ಹಂತಗಳಲ್ಲಿ
3	Do a Good Turn a Day (Maintaining Dairy) ದಿನಕ್ಕೊಂದು ಉತ್ತಮ ಕೆಲಸ ನಿರ್ವಹಣೆ (ದಿನಚರಿ ಪುಸ್ತಕದಲ್ಲಿ ದಾಖಲಿಸುವುದು)	June/ಜೂನ್-2026		All Section	Unit Level ದಳ ಹಂತಗಳಲ್ಲಿ

Local Association Programme/ ಸ್ಥಳೀಯ ಸಂಸ್ಥೆಯ ಕಾರ್ಯಕ್ರಮಗಳು

Sl. ಕ್ರ. No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ ಇಂದ	To/ಗೆ	Section/ ವಿಭಾಗ	Venue/ಸ್ಥಳ
1	2026-27 Annual Plan Lunching, General Information Course for Pry. & High School H.M/ Principals/ SDMC President/Gram Panchayath Members. Unit Registration & Renewal process will start ಪ್ರಾಥಮಿಕ & ಪ್ರೌಢ ಶಾಲಾ ಮುಖ್ಯೋಪಾಧ್ಯಯರು/ ಶಿಕ್ಷಕರುಗಳು/ಪ್ರಾಂಶುಪಾಲರು/ಎಸ್‌ಡಿಎಂಸಿ/ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಸಾಮಾನ್ಯ ಮಾಹಿತಿ ಶಿಬಿರದಲ್ಲಿ 2026–27ನೇ ಪಾರ್ಷಿಕ ಯೋಜನೆ ಬಿಡುಗಡೆ ಸಮಾರಂಭ (ದಳ ನೊಂದಾವಣೆ/ ನವೀಕರಣ ಪ್ರಕ್ರಿಯೆ ಪ್ರಾರಂಭ)	June/ಜೂನ್-2026		H.M/ Principals/ SDMC President/Gram Panchayath Members	L.A. Level ಸ್ಥಳೀಯ ಹಂತಗಳಲ್ಲಿ
2	Dwitiya Charn Cubs, Rajath Pank Bulbuls & Dwitiya Sopana Scouts-Guides Testing Camp ದ್ವಿತೀಯ ಚರಣ್ ಕಬ್ಸ್, ರಜತ್ ಪಂಕ್ ಬುಲ್‌ಬುಲ್ಸ್‌ಗಳಿಗೆ & ದ್ವಿತೀಯ ಸೋಪಾನ ಸ್ಕೌಟ್ಸ್–ಗೈಡ್ಸ್‌ಗಳಿಗೆ ಪರೀಕ್ಷಾ ಶಿಬಿರ	June/ಜೂನ್-2026		Cubs-Bulbuls	L.A. Level ಸ್ಥಳೀಯ ಹಂತಗಳಲ್ಲಿ
3	Scouters and Guiders Conference ಸ್ಕೌಟರ್–ಗೈಡರ್ ಸಮಾವೇಶ ಓ.ವೈ.ಎಂ.ಎಸ್.ನಲ್ಲಿ ನೊಂದಾವಣೆ ಮತ್ತು ತರಬೇತಿ ಪ್ರಗತಿಪರ ಶಿಕ್ಷಣಮೊಂದಿಗೆ	June/ಜೂನ್-2026		Unit Leader	L.A. Level ಸ್ಥಳೀಯ ಹಂತಗಳಲ್ಲಿ
4	L.A Level Basic Course for Cub Masters, Flock Leaders, Scout Masters and Guide Captains ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್‌ಗಳಿಗೆ ಸ್ಥಳೀಯ ಮಟ್ಟದ ಮೂಲ ತರಬೇತಿ ಶಿಬಿರ	June/ಜೂನ್-2026		CM/FL/ SM/GC	L.A. Level ಸ್ಥಳೀಯ ಹಂತಗಳಲ್ಲಿ
5	Community Development Camp ಸಮುದಾಯ ಅಭಿವೃದ್ಧಿ ಶಿಬಿರ	June/ಜೂನ್-2026		All Section ಎಲ್ಲಾ ವಿಭಾಗ	L.A. Level ಸ್ಥಳೀಯ ಹಂತಗಳಲ್ಲಿ
6	Beginners Course for Pry.& High School Teachers ಪ್ರಾಥಮಿಕ & ಪ್ರೌಢ ಶಾಲಾ ಶಿಕ್ಷಕರುಗಳಿಗೆ ಪ್ರಾರಂಭಿಕ ಮಾಹಿತಿ ಶಿಬಿರ	June to December 2026 / ಜೂನ್ ನಿಂದ ಡಿಸೆಂಬರ್ 2026		Teachers ಶಿಕ್ಷಕರು	L.A Level ಸ್ಥಳೀಯ ಹಂತಗಳಲ್ಲಿ

District Association Programme/ ಜಿಲ್ಲಾ ಸಂಸ್ಥೆಯ ಕಾರ್ಯಕ್ರಮ

Sl. ಕ್ರ. No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ ಇಂದ	To/ಗೆ	Section/ ವಿಭಾಗ	Venue/ಸ್ಥಳ
1	Tritiya Sopan Testing Camp for Scouts & Guides ಸ್ಕೌಟ್ಸ್ & ಗೈಡ್ಸ್‌ಗಳಿಗೆ ತೃತೀಯ ಸೋಪಾನ ಪರೀಕ್ಷೆಗಳು	June/ಜೂನ್-2026		S/G ಸ್ಕೌ/ಗೈ	District Level ಜಿಲ್ಲಾ ಮಟ್ಟ
2	Nipun Testing Camp for Ro-Ra. ರೋ.–ರೇಂ.ಗಳಿಗೆ ನಿಪುಣ್ ಪರೀಕ್ಷಾ ಶಿಬಿರ	June/ಜೂನ್-2026		Ro/Ra ರೋ./ರೇಂ	District Level ಜಿಲ್ಲಾ ಮಟ್ಟ
3	Tritiya Charan Cubs & Suvarna Pankh Bulbuls Testing Camp ತೃತೀಯ ಚರಣ ಕಬ್ಸ್ ಮತ್ತು ಸುವರ್ಣ ಪಂಕ್ ಬುಲ್‌ಬುಲ್ಸ್ ಪರೀಕ್ಷಾ ಶಿಬಿರ	June/ಜೂನ್-2026		Cubs-Bulbuls ಕಬ್-ಬುಲ್‌ಬುಲ್	District Level ಜಿಲ್ಲಾ ಮಟ್ಟ
4	Rajyapuraskar Preparatory Camp for Scouts, Guides, Rovers and Rangers ರಾಜ್ಯಪುರಸ್ಕಾರ ಪೂರ್ವಸಿದ್ಧತಾ ಶಿಬಿರ ಸ್ಕೌಟ್ಸ್, ಗೈಡ್ಸ್, ರೋವರ್ಸ್–ರೇಂಜರ್ಸ್	June/ಜೂನ್-2026		S/G/ Ro/Ra ಸ್ಕೌ/ಗೈ/ರೋ./ರೇಂ	District Level ಜಿಲ್ಲಾ ಮಟ್ಟ

5	Community Development Camp ಸಮುದಾಯ ಅಭಿವೃದ್ಧಿ ಶಿಬಿರ	June/ಜೂನ್-2026	All Section ಎಲ್ಲಾ ವಿಭಾಗ	District Level ಜಿಲ್ಲಾ ಮಟ್ಟ
6	Formation of Youth Committee ಯುವ ಸಮಿತಿ ರಚನೆ	June/ಜೂನ್-2026		District Level ಜಿಲ್ಲಾ ಮಟ್ಟ
7	District Executive Committee Meeting ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆ	June/ಜೂನ್-2026		District Level ಜಿಲ್ಲಾ ಮಟ್ಟ
8	L.A/D.A Office Beaers Meeting ಸ್ಥಳೀಯ/ಜಿಲ್ಲಾ ಪದಾಧಿಕಾರಿಗಳ ಸಭೆ	June/ಜೂನ್-2026	Office Beaers ಪದಾಧಿಕಾರಿಗಳು	District Level ಜಿಲ್ಲಾ ಮಟ್ಟ
9	BEO, CRP, BRP, ECO, TPEO Meeting ಬಿ.ಇ.ಓ, ಸಿ.ಆರ್.ಪಿ, ಬಿ.ಆರ್.ಪಿ, ಇ.ಸಿ.ಓ., ಟಿ.ಪಿ.ಇ.ಓ ಸಭೆ	June/ಜೂನ್-2026	Officers ಅಧಿಕಾರಿಗಳು	District Level ಜಿಲ್ಲಾ ಮಟ್ಟ
10	Beginners Course for P.U.C & Degree College Lecturers ಪಿ.ಯು.ಸಿ & ಪದವಿ ಶಿಕ್ಷಣ ಉಪನ್ಯಾಸಕರುಗಳಿಗೆ ಪ್ರಾರಂಭಿಕ ಮಾಹಿತಿ ಶಿಬಿರ	June/ಜೂನ್-2026	Lecturer ಉಪನ್ಯಾಸಕರು	District Level ಜಿಲ್ಲಾ ಮಟ್ಟ
11	Re-orientation Training Course for Scouters-Guiders ಸ್ಕೌಟರ್ಸ್-ಗೈಡರ್ಸ್‌ಗಳಿಗೆ ಪುನರ್‌ಶ್ಚೇತನ ತರಬೇತಿ ಶಿಬಿರ	June-July – 2026 /ಜೂನ್-ಜುಲೈ-2026	Scouters-Guiders	District Level ಜಿಲ್ಲಾ ಮಟ್ಟ
12	Bunny Leader Training Course for Anganavadi Teachers ಅಂಗನವಾಡಿ ಶಿಕ್ಷಕಿಯರುಗಳಿಗೆ ಬನ್ನಿ ನಾಯಕಿಯರ ತರಬೇತಿ ಶಿಬಿರ	June2026 - Feb. 2027 ಜೂನ್ 2026 – ಫೆಬ್ರವರಿ 2027	Anganavadi Teachers ಅಂಗನವಾಡಿ ಶಿಕ್ಷಕಿಯರು	District Level ಜಿಲ್ಲಾ ಮಟ್ಟ

State Association Programme/ರಾಜ್ಯ ಸಂಸ್ಥೆಯ ಯುವ ಕಾರ್ಯಕ್ರಮಗಳು ಮತ್ತು ರೋವರ್ಸ್ – ರೇಂಜರ್ಸ್ ಚಟುವಟಿಕೆಗಳು

Sl. ಕ್ರ. No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ ಇಂದ	To/ಗೆ	Section/ ವಿಭಾಗ	Venue/ಸ್ಥಳ
1	Food Marshalls Training For Adult ಫುಡ್ ಮಾರ್ಷಲ್ ತರಬೇತಿ ಶಿಬಿರ	June/ಜೂನ್-2026		S/G, Ro/Ra ಸ್ಕೌ/ಗೈ, ರೋ/ರೇ	District Level ಜಿಲ್ಲಾ ಮಟ್ಟ
2	Vocational Training Camp for Senior Scouts - Guides ಸ್ಕೌಟ್ಸ್-ಗೈಡ್ಸ್‌ಗಳಿಗೆ ವೃತ್ತಿ ಕೌಶಲ್ಯಗಳ ತರಬೇತಿ ಶಿಬಿರ	June/ಜೂನ್-2026		S/G ಸ್ಕೌ/ಗೈ	Kolar ಕೋಲಾರ
3	Sri. Krishna Rajendra Wodeyar Birthday Celebration – Zoom Webinar ಶ್ರೀ. ಕೃಷ್ಣ ರಾಜೇಂದ್ರ ಒಡೆಯರ್ ಜನ್ಮದಿನಾಚರಣೆ – ಇವರ ಸಾಧನೆಗಳ ಸ್ಮರಣೆ & ವೆಬಿನಾರ್	04.06.2026			Online ಆನ್‌ಲೈನ್
	Rashtrapathi Award Application Registration Approved by District & State ರಾಷ್ಟ್ರಪತಿ ಪ್ರಶಸ್ತಿಗೆ ನೊಂದಣಿ ಜಿಲ್ಲೆ ಮತ್ತು ರಾಜ್ಯ ಅನುಮೋದನೆಯೋಂದಿಗೆ				

4	State Level Heritage Camp	June/July 2026 ಜೂನ್/ಜುಲೈ-2026	Senior Scout/Guide ಹಿರಿಯ ಸ್ಕೌ/ಗೈ Rovers-Rangers	Vijayanagara ವಿಜಯನಗರ
5	Yuva Apadamitra Volunteer Training Camp ಯುವ ಅಪದಮಿತ್ರ ಸ್ವಯಂ ಸೇವಕರ ತರಬೇತಿ	June/July 2026 ಜೂನ್/ಜುಲೈ-2026	ರೋವರ್ಸ್–ರೇಂಜರ್ಸ್ Rovers-Rangers	ಬೆಂಗಳೂರು ಚಿಕ್ಕಮಗಳೂರು ಶಿವಮೊಗ್ಗ ಉಡುಪಿ
6	State Level Gayana Camp ರಾಜ್ಯ ಮಟ್ಟದ ಗಾಯನ ಶಿಬಿರ	June/July 2026 ಜೂನ್/ಜುಲೈ 2026	Senior S-G ಹಿರಿಯ ಸ್ಕೌಟ್ಸ್–ಗೈಡ್ಸ್,ರೋ–ರೇ	Dharwad ಧಾರವಾಡ
7	State Level Rajyapuraskar Rally ರಾಜ್ಯ ಮಟ್ಟದ ರಾಜ್ಯಪುರಸ್ಕಾರ ರ್ಯಾಲಿ	June/July 2026 ಜೂನ್/ಜುಲೈ 2026	C/B/S/G/Ro/Ra ಕ/ಬು/ಸ್ಕೌ/ಗೈ/ರೋ./ರೇಂ.	SHQ, B'lore (Function at Lok Bhavan) ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು (ಕಾರ್ಯಕ್ರಮ – ಲೋಕಭವನ)

State Level Adult Training Course/ರಾಜ್ಯ ಮಟ್ಟದ ವಯಸ್ಕ ನಾಯಕರ ತರಬೇತಿ ಶಿಬಿರಗಳು

Sl. ಕ್ರ. No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ ಇಂದ	To/ಗೆ	Section/ ವಿಭಾಗ	Venue/ಸ್ಥಳ
1	Divisional Level Advanced Course for Scout Master & Guide Captains, Cub Master & Flock Leaders, Rover Scout Leader & Ranger Leaders ವಿಭಾಗೀಯ ಮಟ್ಟದ ಕಬ್ ಮಾಸ್ಟರ್ಸ್ ಮತ್ತು ಫ್ಲಾಕ್ ಲೀಡರ್ಸ್ ಸ್ಕೌಟ್ ಮಾಸ್ಟರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳಿಗೆ ಮುಂದುವರೆದ ತರಬೇತಿ ಶಿಬಿರ	June/ಜೂನ್-2026		CM/FL/ SM/GC/ RSL/RL ಕ.ಮಾ/ಫ್ಲಾ.ಲೀ/ ಸ್ಕೌ.ಮಾ/ಗೈ.ಕ್ಯಾ/ ರೋ.ಸ್ಕೌ.ಲೀ/ ರೇಂ.ಲೀ	Divisional Level ವಿಭಾಗೀಯ ಮಟ್ಟ
2	Online DDPI (Administration & Development) PU DDPU Meeting ಆನ್‌ಲೈನ್ ಡಿಡಿಪಿಐ (ಆಡಳಿತ ಮತ್ತು ಅಭಿವೃದ್ಧಿ), ಪಿ.ಯು ಡಿಡಿಪಿಯು ಸಭೆ	June/ಜೂನ್-2026		Education Officers	State Level ರಾಜ್ಯ ಮಟ್ಟ
3	State Level Basic Course for Scout Masters & Guide Captains – Moraji Desai/ Ekalavya/Kittur Rani Chennamma/Atalbihari Vajpai Residential School & Education Department ಮೂರಾರ್ಜಿ ದೇಸಾಯಿ/ಏಕಲವ್ಯ/ಕಿತ್ತೂರು ರಾಣಿ ಚೆನ್ನಮ್ಮ/ ಅಟಲ್‌ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಶಿಕ್ಷಕರಿಗೆ ಸ್ಕೌಟ್ ಮಾಸ್ಟರ್ಸ್ & ಗೈಡ್ ಕ್ಯಾಪ್ಟನ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ ಮತ್ತು ಸರ್ಕಾರದ ವಿವಿಧ ಇಲಾಖೆ	June/ಜೂನ್-2026 July/ಜುಲೈ-2026		SM/GC ಸ್ಕೌ.ಮಾ/ ಗೈ.ಕ್ಯಾ	State Level ರಾಜ್ಯ ಮಟ್ಟ

4	State Level D.T.C Meet ರಾಜ್ಯ ಮಟ್ಟದ ಜಿಲ್ಲಾ ತರಬೇತಿ ಆಯುಕ್ತರುಗಳ ಸಮಾವೇಶ	June/ಜೂನ್ 2026 July/ಜುಲೈ -2026	DTC ಡಿಟಿಸಿಗಳು	State Level ರಾಜ್ಯ ಮಟ್ಟ
5	Teacher Association President Secretaries Meeting ರಾಜ್ಯ ಮಟ್ಟದ ಎಲ್ಲಾ ಶಿಕ್ಷಕರ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿಗಳ ಸಭೆ	June/ಜೂನ್ 2026 July/ಜುಲೈ -2026		State Level ರಾಜ್ಯ ಮಟ್ಟ
6	Centenary Celebration of Karnataka Scout & Guide Magazine ಕರ್ನಾಟಕ ಸ್ಕೌಟ್– ಗೈಡ್ ಮಾಸಪತ್ರಿಕೆಯ ಶತಮಾನೋತ್ಸವ ಆಚರಣೆ	June/ಜೂನ್ 2026 July/ಜುಲೈ -2026		State Level ರಾಜ್ಯ ಮಟ್ಟ









YVK Murthy

JULY / ಜುಲೈ 2026

ಧ್ಯೇಯ: ಸ್ಕೌಟ್ಸ್ ಮತ್ತು ಗೈಡ್ಸ್
ಸ್ಥಾರ್ತಿಯ ಜಿಲುಮೆಗಳು



Jayachamarajendra Wadiyar











UNIT LEVEL PROGRAMME/ ದಳ ಮಟ್ಟದ ಕಾರ್ಯಕ್ರಮ

Sl. ಕ್ರ. No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ ಇಂದ	To/ಗೆ	Section/ ವಿಭಾಗ	Venue/ಸ್ಥಳ
1	Rain water Harvesting Programme (Namami Ganga Project) Activity Pack will be given ಮಳೆ ಕೊಯ್ಲು/ನೀರು ಇಂಗಿಸುವಕಾರ್ಯಕ್ರಮ (ನಮಾಮಿ ಗಂಗಾ ಪ್ರಾಜೆಕ್ಟ್)ಆಕ್ಟಿವಿಟಿ ಪ್ಯಾಕ್ ನೀಡಲಾಗುವುದು.	July/ಜುಲೈ-2026		All Section ಎಲ್ಲಾ ವಿಭಾಗ	Unit Level ದಳ ಹಂತಗಳಲ್ಲಿ
2	Preparing Family Tree Competition ವಂಶವೃಕ್ಷ ತಯಾರಿಕೆ ಸ್ಪರ್ಧೆ	July/ಜುಲೈ-2026		All Section ಎಲ್ಲಾ ವಿಭಾಗ	Unit Level ದಳ ಹಂತಗಳಲ್ಲಿ
3	Parents Day Celebration ಪೋಷಕರ ದಿನಾಚರಣೆ (ಪೋಷಕರಿಗೆ ಸಮಾವೇಶವನ್ನು ಆಯೋಜಿಸುವುದು, ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಿ, ಬಹುಮಾನವನ್ನು ನೀಡುವುದು. ಮಕ್ಕಳಿಂದ ಗ್ರೀಟಿಂಗ್ ಕಾರ್ಡ್ ಸ್ಪರ್ಧೆ, ಹೂಗುಚ್ಛ, ಕವನ ರಚಿಸುವುದು, ಇತ್ಯಾದಿಗಳನ್ನು ಸಿದ್ಧಪಡಿಸಿ ಪೋಷಕರುಗಳಿಗೆ ಕಾಣಿಕೆ ನೀಡುವುದು) ರಾಷ್ಟ್ರಪತಿ ಸ್ಕೌಟ್–ಗೈಡ್ಸ್, ರೋವರ್ಸ್ – ರೇಂಜರ್ಸ್‌ಗಳನ್ನು ಸನ್ಮಾನಿಸುವುದು. ಚಟುವಟಿಕೆ ಪ್ಯಾಕ್ ನೀಡುವುದು.	27.07.2026 July/ಜುಲೈ-2026 (19th to 27th July 2026) one week celebration		All Section ಎಲ್ಲಾ ವಿಭಾಗ ವೆಬಿನಾರ್	Unit Level ದಳ ಹಂತಗಳಲ್ಲಿ
4	Kargil Vijayostava – Honouring to Army Officers & Write a letter to Army Officers. ಕಾರ್ಗಿಲ್ ವಿಜಯೋತ್ಸವ ಕ್ಯಾಂಡಲ್ ಲೈಟ್ ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಮಾಜಿ ಸೈನಿಕರಿಗೆ ಗೌರವ ಸಮರ್ಪಣೆ – ಸ್ಥಳೀಯವಾಗಿ ಸೈನಿಕರವಿಳಾಸಗಳನ್ನು ಸಂಗ್ರಹಿಸಿ ಸೈನದಲ್ಲಿರುವ ಸೈನಿಕರಿಗೆ ಪತ್ರ ಬರೆಯುವುದು	July/ಜುಲೈ-2026 26.07.2026		All Section ಎಲ್ಲಾ ವಿಭಾಗ	Unit Level ದಳ ಹಂತಗಳಲ್ಲಿ

Local Association Programme/ ಸ್ಥಳೀಯ ಸಂಸ್ಥೆಯ ಕಾರ್ಯಕ್ರಮಗಳು

Sl. ಕ್ರ. No. ಸಂ.	Name of the Event/ ಕಾರ್ಯಕ್ರಮದ ಹೆಸರು	From/ ಇಂದ	To/ಗೆ	Section/ವಿಭಾಗ	Venue/ಸ್ಥಳ
1	Preparing Family Tree Competition ವಂಶವೃಕ್ಷ ತಯಾರಿಕೆ ಸ್ಪರ್ಧೆ	July/ಜುಲೈ-2026		All Section ಎಲ್ಲಾ ವಿಭಾಗ	L.A. Level ಸ್ಥಳೀಯ ಮಟ್ಟ
2	Badge work Camp for Scouts, Guides, Rovers, Rangers ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳಿಗೆ ಪದಕ ತರಬೇತಿ ಶಿಬಿರ	July/ಜುಲೈ-2026		S/G/ Ro/Ra ಸ್ಕೌ/ಗೈ/ರೋ/ರೇಂ	L.A. Level ಸ್ಥಳೀಯ ಮಟ್ಟ
3	Information about SDG's to Cubs-Bulbuls, Scouts-Guides, Rovers-Rangers and Unit Leaders ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಮತ್ತು ದಳನಾಯಕರುಗಳಿಗೆ ಸುಸ್ಥಿರ ಅಭಿವೃದ್ಧಿ ಗುರಿಗಳ ಬಗ್ಗೆ ಮಾಹಿತಿ.	July/ಜುಲೈ-2026		All Section ಎಲ್ಲಾ ವಿಭಾಗ	L.A. Level ಸ್ಥಳೀಯ ಮಟ್ಟ
3	Rovers-Rangers Mate ರೋವರ್ಸ್– ರೇಂಜರ್ಸ್ ಮೇಟ್	July/ಜುಲೈ-2026		Ro/Ra ರೋ/ರೇಂ	L.A. Level ಸ್ಥಳೀಯ ಮಟ್ಟ
4	Geetha Gayana Competitation – Guideline will be given ದೇಶಭಕ್ತಿ ಗೀತಗಾಯನ ಸ್ಪರ್ಧೆ– ಮಾರ್ಗಸೂಚಿಯನ್ನು ನೀಡಲಾಗುವುದು	July/ಜುಲೈ-2026		C/BB/ S/G/ Ro/Ra ಕ/ಬು ಸ್ಕೌ/ಗೈ /ರೋ/ರೇಂ	L.A. Level ಸ್ಥಳೀಯ ಮಟ್ಟ
5	Petrol Leaders Camp for Scouts and Guides ಪಟಾಲಂ ನಾಯಕರ ಸ್ಕೌಟ್ಸ್‌ಗೈಡ್ ತರಬೇತಿ ಶಿಬಿರ	July 2026 / ಜುಲೈ – 2026		S/G ಸ್ಕೌ/ಗೈ	L.A. Level ಸ್ಥಳೀಯ ಮಟ್ಟ
6	Kabaddi Match Competation ಕಬ್ಬಡಿ ಪಂದ್ಯ ಸ್ಪರ್ಧೆ	July 2026 / ಜುಲೈ – 2026		S/G ಸ್ಕೌ/ಗೈ	L.A. Level ಸ್ಥಳೀಯ ಮಟ್ಟ
